# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 927 |
| ಸದಸ್ಯರ ಹೆಸರು | ಶ್ರೀ ಯು.ಬಿ.ವೆಂಕಟೇಶ್ |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಕಡಬ ತಾಲ್ಲೂಕು ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಅನ್ನ ಪ್ರಸಾದಕ್ಕೆ ದಿನಸಿ ಪದಾರ್ಥಗಳನ್ನು ಇ-ಟೆಂಡರ್ ಮೂಖಾಂತರ ಖರೀದಿಸದೆ ನೇರವಾಗಿ ಮಾರುಕಟ್ಟೆ ದರದಲ್ಲಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲೂಕು, ಕುಕ್ಕೆ ಗ್ರಾಮದ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಅನ್ನ ಪ್ರಸಾದಕ್ಕೆ ದಿನಸಿ ಪದಾರ್ಥಗಳನ್ನು ಇ-ಟೆಂಡರ್ ಮುಖಾಂತರ ಖರೀದಿಸದೆ ನೇರವಾಗಿ ಜನತಾ ಬಜಾರ ಮುಖಾಂತರ ಖರೀದಿಸಲಾಗಿರುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸದರಿ ಪ್ರಕರಣದ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ: ಕಂಇ 239 ಮುಸಪ್ರ 2022 ದಿನಾಂಕ:17-07-2023 ರಂತೆ ಸದರಿ ದೇವಾಲಯಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸೇವೆ ಮತ್ತು ಸರಕುಗಳನ್ನು KTPP ಕಾಯ್ದೆ ಮತ್ತು ನಿಯಮಗಳ ಅನುಸಾರ ಇ-ಟೆಂಡರ್ ಮೂಲಕ ಸರಬರಾಜು ಮಾಡಿಕೊಳ್ಳಲು ಸಂಬಂಧಪಟ್ಟವರಿಗೆ ತಿಳಿಸಲಾಗಿದ್ದು, ಅದರಂತೆ ಪ್ರಸಕ್ತ ಇ-ಟೆಂಡರ್ ಮೂಲಕ ಖರೀದಿಸಲು ಸಂ. ಕೆಎಸ್ಎಸ್‌ಟಿ:ನಿವಿಪ:1/ದಿನಸಿ/2023-24 ದಿನಾಂಕ: 15-11-2023ರಲ್ಲಿ ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಟೆಂಡರ್ ಅಂತಿಮಗೊಳಿಸುವಲ್ಲಿ ವಿಳಂಭವಾಗಿರುವ ಬಗ್ಗೆ ತನಿಖೆ ನಡೆಸಿ, ನಿಯಮಾನುಸಾರ ಕ್ರಮವಹಿಸಲಾಗುವುದು. |
| ಆ) | ಮಾರುಕಟ್ಟೆ ದರದಲ್ಲಿ ಖರೀದಿಸುವ ಬಗ್ಗೆ ಆಗಿರುವ ಕರಾರು ಅಂಶಗಳೇನು. ಕರಾರು ವಾಯಿದೆ ಯಾವಾಗ ಮುಕ್ತಾಯಗೊಳ್ಳಲಿದೆ: | ಪ್ರಸ್ತುತ ಜನತಾ ಬಜಾರು ರವರೊಂದಿಗೆ ಯಾವುದೇ ಖರೀದಿ ಕರಾರು ಆಗಿರುವುದಿಲ್ಲ, ಸರ್ಕಾರದ ಪತ್ರ ಸಂಖ್ಯೆ: ಕಂಇ 239 ಮುಸಪ್ರ 2022 ದಿನಾಂಕ:17-07-2023 ರಂತೆ ಸದರಿ ದೇವಾಲಯಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸೇವೆ ಮತ್ತು ಸರಕುಗಳನ್ನು KTPP ಕಾಯ್ದೆ ಮತ್ತು ನಿಯಮಗಳ ಅನುಸಾರ ಇ-ಟೆಂಡರ್ ಮೂಲಕ ಸರಬರಾಜು ಮಾಡಿಕೊಳ್ಳಲು ಇ-ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಈ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರೊಂದಿಗೆ ಕರಾರು ಮಾಡಿಕೊಂಡು ಟೆಂಡರ್‌ನಲ್ಲಿ ಸೂಚಿಸಿರುವ ದರದಲ್ಲಿ ಅಗತ್ಯ ದಿನಸಿ ಪದಾರ್ಥಗಳನ್ನು ಖರೀದಿಸಲಾಗುವುದು. |
| ಇ) | ಹೊಸ ಕರಾರು ಪೂರ್ಣದಲ್ಲಿ ಇ-ಟೆಂಡರ್‌ಗೆ ಆದ್ಯತೆ ನೀಡಲಾಗುವುದೇ? | ಪ್ರಸಕ್ತ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸೇವೆ ಮತ್ತು ಸರಕುಗಳನ್ನು KTPP ಕಾಯ್ದೆ ಮತ್ತು ನಿಯಮಗಳ ಅನುಸಾರ ಇ-ಟೆಂಡರ್ ಮೂಲಕ ಸರಬರಾಜು ಮಾಡಿಕೊಳ್ಳಲು ಇ-ಟೆಂಡರ್ ಕರೆಯಲಾಗಿರುತ್ತದೆ. |

ಸಂಖ್ಯೆ: ಕಂಇ 85 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು